**ಸಿವಿಲ್ ನ್ಯಾಯಾಧೀಶರು ಮತ್ತು ಅಧಿಕ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ತರೀಕೆರೆ**

**ಉಪಸ್ಥಿತರು**

**ಶ್ರೀಮತಿ ಪವಿತ್ರ.ಎಂ.ಡಿ, ಬಿ.ಎ., ಎಲ್‌ಎಲ್‌ಬಿ.,**
**ಸಿವಿಲ್ ನ್ಯಾಯಾಧೀಶರು ಮತ್ತು ಅಧಿಕ ಪ್ರ.ದ.ನ್ಯಾ.ದಂ,**
**ತರೀಕೆರೆ.**

## ಅಸಲು ದಾವಾ.ನಂ.25/2019

**ದಿನಾಂಕಃ 21ನೇ ಸೆಪ್ಟೆಂಬರ್ 2020**

**ವಾದಿ**ಯರು : ಲೋಲಾಕ್ಷಿ ಮತ್ತೊಬ್ಬರು
(ಪ್ರತಿನಿಧಿಸಿದವರು : ಶ್ರೀ ಕೆ.ಲಿಂಗರಾಜು-ನ್ಯಾಯವಾದಿಗಳು)

**- ವಿರುದ್ಧ -**

**ಪ್ರತಿವಾದಿ**ಯಿರು : ಶಾರದಮ್ಮ ಮತ್ತಿತರರು
(ಪ್ರತಿನಿಧಿಸಿದವರು : ಶ್ರೀ ಎಂ.ಲೋಕೇಶ್-ನ್ಯಾಯವಾದಿಗಳು)

## ಮಧ್ಯಂತರ ಅರ್ಜಿ ಸಂಖ್ಯೆ:1

**ಅರ್ಜಿದಾರರು** : ಲೋಲಾಕ್ಷಿ ಮತ್ತೊಬ್ಬರು

**- ವಿರುದ್ಧ -**

**ಎದುರುದಾರರು** : ಶಾರದಮ್ಮ ಮತ್ತಿತರರು

## ಮಧ್ಯಂತರ ಅರ್ಜಿ ಸಂಖ್ಯೆ:1 ರ ಮೇಲಿನ ಆದೇಶ

ವಾದಿಯ ರು ಪ್ರಸ್ತುತ ಅರ್ಜಿಯನ್ನು ಸಿ.ಪಿ.ಸಿ ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಸಲ್ಲಿಸಿದ್ದು, ಸದರಿ ಅರ್ಜಿಯಲ್ಲಿ ಪ್ರತಿವಾದಿಯರು ದಾವಾ ಸ್ವತ್ತುಗಳನ್ನು ಯಾರಿಗೂ ಮಾರಾಟ/ಪರಭಾರೆ, ಆಧಾರ ಮಾಡದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ನೀಡಬೇಕೆಂದು ಪ್ರಾರ್ಥಿಸಿರುತ್ತಾರೆ.

2. ಅರ್ಜಿದಾರರು ತಮ್ಮ ಅರ್ಜಿಯೊಂದಿಗೆ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ದಾವಾ ಸ್ವತ್ತುಗಳ ಖಾತೆಯು ಪ್ರತಿವಾದಿಯರ ಹೆಸರಿನಲ್ಲಿದ್ದು, ಇದನ್ನು ದುರುಪಯೋಗ ಪಡಿಸಿಕೊಂಡು ಪ್ರತಿವಾದಿಯಾರು ಸದರಿ ಆಸ್ತಿಯನ್ನು ಬೇರೆಯವರಿಗೆ ಕ್ರಯಪತ್ರ, ಮರಣ ಶಾಸನ ಪತ್ರ, ದಾನ ಪತ್ರ, ಇತರೆ ಪತ್ರಗಳ ಮೂಲಕ ಪರಭಾರೆ ಮಾಡುವ ಸಾಧ್ಯತೆ ಇದ್ದು ಹಾಗೂ ಬ್ಯಾಂಕುಗಳಿಗೆ ಆಧಾರ ಮಾಡಿ ಸಾಲ ಪಡೆಯುವ ತರಾತುರಿಯಲ್ಲಿದ್ದು, ಒಂದುವೇಳೆ ಪ್ರತಿವಾದಿಯರು ದಾವಾ ಸ್ವತ್ತನ್ನು ಬೇರೆಯವರಿಗೆ ಪರಭಾರೆ ಮಾಡಿದ್ದಲ್ಲಿ ಮತ್ತು ಬ್ಯಾಂಕುಗಳಿಗೆ ಆಧಾರ ಮಾಡಿ ಸಾಲ ಪಡೆದರೆ ಅವರಿಗೆ ತುಂಬಲಾರದ ನಷ್ಟ ಉಂಟಾಗುತ್ತದೆಂದು ಹಾಗೂ ಅವರು ದಾವೆಯನ್ನು ಸಲ್ಲಸಿದ ಉದ್ದೇಶ ಈಡೇರದಂತೆ ಆಗುತ್ತದೆಂದು ಹೇಳಿರುತ್ತಾರೆ. ಅವರು ಮುಂದುವರೆದು, ಒಂದುವೇಳೆ ಅವರ ಪರವಾಗಿ ಆದೇಶಿಸಿದ್ದಲ್ಲಿ ಎದುರುದಾರರಿಗ ಯಾವುದೇ ತರನಾಗಿ ನಷ್ಟ ಉಂಟಾಗುವುದಿಲ್ಲವೆಂದು ಹಾಗೂ ಈ ದಾವೆಗೆ ಮೇಲ್ನೋಟಕ್ಕೆ ಕಾಣುವಂತಹ ಎಲ್ಲಾ ಲಕ್ಷಣಗಳು ಅವರ ಪರವಾಗಿ ಇರುವ ಕಾರಣ ಅರ್ಜಿಯಲ್ಲಿ ಪ್ರಾರ್ಥಿಸಿದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ಕೋರಿರುತ್ತಾರೆ.

3. 5 ನೇ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ವಾದಿಯರ ಪ್ರಕರಣವನ್ನು ಸಂಪೂರ್ಣವಾಗಿ ಅಲ್ಲಗಳೆದಿದ್ದು, ಅವರು ಮುಂದುವರೆದು, ಅವರು ದಾವಾ ಸ್ವತ್ತನ್ನು ಖರೀದಿಸುವಾಗ 4 ನೇ ಪ್ರತಿವಾದಿಗೆ ಹಾಗೂ ಅವರ ಕುಟುಂಬಕ್ಕೆ ವಿಭಾಗದ ಮುಖಾಂತರ ದಿನಾಂಕ 01.09.2010 ರಂದು ನೋಂದಾಯಿತ ಪತ್ರವಾಗಿದ್ದು, ಸದರಿ ಸ್ವತ್ತನ್ನು ಖರೀದಿಸಿದ ನಂತರ ಅಭಿವೃದ್ಧಿ ಮಾಡಿ ಅಡಿಕೆ ಮತ್ತು ತೆಂಗಿನ ತೋಟವನ್ನು ಮಾಡಿದ್ದು, ಲಕ್ಷಾಂತರ ರೂಪಾಯಿಗಳನ್ನು ವ್ಯಯ ಮಾಡಿರುತ್ತೇನೆಂದು ಹೇಳಿರುತ್ತಾರೆ. ಅವರು ಮುಂದುವರೆದು, ದಾವಾ ಸ್ವತ್ತು ಪ್ರತಿವಾದಿಯರ ಕುಟುಂಬಕ್ಕೆ ಪಿತ್ರಾರ್ಜಿತ ಆಸ್ತಿಯಾಗಿರದೆ ದಾನದ ಮೂಲಕ ಗೌರಮ್ಮ ಕೋಂ ಗಿರಿಯಣ್ಣನವರಿಂದ ಅವರ ಮಗಳಾದ ನಂಜಮ್ಮನವರಿಗೆ ಬಂದಿದ್ದು, 4 ನೇ ಪ್ರತಿವಾದಿಗೆ ವಿಭಾಗದ ಮೂಲಕ ಬಂದಿದ್ದು, ವಾದಿಯರ ಅಸ್ತಿತ್ವ 5 ನೇ ಪ್ರತಿವಾದಿಗೆ ಯಾವುದೇ ರೀತಿಯಲ್ಲಿ ಕಂಡುಬರದೇ ಇದ್ದ ಕಾರಣ 4 ನೇ ಪ್ರತಿವಾದಿ ಮತ್ತು ಅವರ ಕುಟುಂಬದಿಂದ

ದಾವಾ ಸ್ವತ್ತನ್ನು ಖರೀದಿಸಿರುತ್ತೇನೆಂದು ಹೇಳಿರುತ್ತಾರೆ. ವಾದಿಯರು 5 ನೇ ಪ್ರತಿವಾದಿಯ ವಿರುದ್ಧ ಯಾವುದೇ ಪರಿಹಾರ ಪಡೆಯಲು ಅರ್ಹರಿರುವುದಿಲ್ಲವೆಂದು, ವಾದಿಯರು ದಾವಾ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ಪ್ರಸ್ತುತ ದಾವೆಯನ್ನು ಸಲ್ಲಿಸಿರುವ ಕಾರಣ ವಾದಿಯ ದಾವೆಯನ್ನು ವಜಾ ಮಾಡಲು ಪ್ರಾರ್ಥಿಸಿರುತ್ತಾರೆ.

4. ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು.

5. ಮೇಲ್ಕಾಣಿಸಿದ ಸಂಗತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ನನ್ನ ಪರಿಶೀಲನೆಗೆ ಉದ್ಭವಿಸಿರುತ್ತವೆಃ

## ಅಂಶಗಳು

1) ವಾದಿಯರು/ಅರ್ಜಿದಾರರು ಮೇಲ್ನೋಟಕ್ಕೆ ಸಾಬೀಸುಪಡಿಸುವ ಪ್ರಕರಣವನ್ನು ಹೊಂದಿರುತ್ತಾರೆ ಎನ್ನುವುದನ್ನು ಸಾಬೀತುಪಡಿಸಿದ್ದಾರೆಯೇ?

2) ವಾದಿಯರು/ಅರ್ಜಿದಾರರು ತಮ್ಮ ಪರವಾಗಿ ಅನುಕೂಲತೆಯ ಸಮತೋಲನವನ್ನು ಹೊಂದಿರುತ್ತಾರೆ ಎನ್ನುವುದನ್ನು ಸಾಬೀತುಪಡಿಸಿದ್ದಾರೆಯೇ?

3) ವಾದಿಯರು/ಅರ್ಜಿದಾರರಿಗೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡದೇ ಹೋದಲ್ಲಿ ತಮಗೆ ತೊಂದರೆ ಹಾಗೂ ನಷ್ಟ ಆಗುತ್ತದೆ ಎನ್ನುವುದನ್ನು ಸಾಬೀತುಪಡಿಸಿದ್ದಾರೆಯೇ?

4) ಹಾಗಾದರೆ ಯಾವ ಆದೇಶ?

6. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡ ಕಾರಣಗಳಿಂದ ಈ ರೀತಿ ಇದೆಃ

| | | |
|---|---|---|
| ಅಂಶ – 1 | ಃ | ಸಕಾರಾತ್ಮಕವಾಗಿ, |
| ಅಂಶ – 2 | ಃ | ಸಕಾರಾತ್ಮಕವಾಗಿ, |
| ಅಂಶ – 3 | ಃ | ಸಕಾರಾತ್ಮಕವಾಗಿ, |
| ಅಂಶ – 4 | ಃ | ಕೊನೆಯ ಆದೇಶದ ಮೇರೆಗೆ. |

## ಕಾ ರ ಣ ಗ ಳು

7. **ಅಂಶ– 1 ರಿಂದ 3:-** ಈ ಅಂಶಗಳು ಒಂದಕ್ಕೊಂದು ಆಂತರಿಕ ಸಂಬಂಧ ಹೊಂದಿರುವುದರಿಂದಲೂ, ಮತ್ತು ಇವುಗಳಿಗೆ ನೀಡಲಾಗುವ ಕಾರಣಗಳು ಒಂದೇ ರೀತಿ ಇರುವುದರಿಂದಲೂ, ವಿಷಯದ ಪುನರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ ಇವುಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ವಾದಿಯರು ಪ್ರಸ್ತುತ ದಾವೆಯನ್ನು ದಾವಾ ಸ್ವತ್ತುಗಳಲ್ಲಿ ಅವರಿಗೆ 1/4 ನೇ ಭಾಗದ ಹಿಸ್ಸೆ ಇದೆ ಎಂದು ಘೋಷಿಸಿ ಪ್ರತ್ಯೇಕ ವಿಭಜನೆ ಮಾಡಿ ದಿನಾಂಕ 01.09.2010 ಮತ್ತು ದಿನಾಂಕ 16.04.2013 ರಂದು ಮಾಡಿಕೊಂಡಿರುವ ವಿಭಾಗ ಪತ್ರಗಳು ಹಾಗೂ ದಿನಾಂಕ 11.02.2011 ರಂದು 4 ನೇ ಪ್ರತಿವಾದಿಯು 5 ನೇ ಪ್ರತಿವಾದಿಗೆ ಬರೆದುಕೊಟ್ಟಿರುವ ಶುದ್ಧ ಕ್ರಯಪತ್ರವು ವಾದಿಯರ ಹಿಸ್ಸೆಗೆ ಬಂಧನಕಾರಿಯಾಗುವುದಿಲ್ಲವೆಂದು ಘೋಷಿಸಬೇಕಾಗಿ ಪ್ರಾರ್ಥಿಸಿರುತ್ತಾರೆ. ವಾದಿಯರ ಪ್ರಕರಣವೇನೆಂದರೆ, ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಯರು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರಾಗಿದ್ದು, ಅವರ ಕುಟುಂಬದ ಮೂಲಪುರುಷನಾದ ಕೆ.ಎನ್.ಚಂದ್ರಶೇಖರ್ ರವರಿಗೆ ಪಿತ್ರಾರ್ಜಿತವಾಗಿ ಬಂದಂತಹ 4 ಎಕರೆ 2 ಗುಂಟೆ ವಿಸ್ತೀರ್ಣದ ದಾವಾ ಅನುಸೂಚಿ ಸ್ವತ್ತಿದ್ದು, ಸದರಿ ಸ್ವತ್ತಿಗೆ ಸಂಬಂಧಿಸಿದಂತೆ 1 ನೇ ವಾದಿಯ ಗಂಡ ಹಾಗೂ 2 ನೇ ವಾದಿಯ ತಂದೆಯಾದ ಕೆ.ಸಿ.ಹಾಲಪ್ಪನವರನ್ನು ವಿಭಾಗ ಪತ್ರಕ್ಕೆ ಸೇರಿಸಿಕೊಳ್ಳದೆ ದಿನಾಂಕ 01.09.2010 ರಂದು 1 ರಿಂದ 4 ನೇ ಪ್ರತಿವಾದಿಯರು ವಿಭಾಗ ಪತ್ರವನ್ನು ಮಾಡಿಕೊಂಡಿರುತ್ತಾರೆ. ಅವರು ಮುಂದುವರೆದು, ಸದರಿ ವಿಭಾಗದಲ್ಲಿ ಮೃತ ಚಂದ್ರಪ್ಪನವರಿಗೆ 2 ಎಕರೆ 2 ಗುಂಟೆ ಹಾಗೂ 4 ನೇ ಪ್ರತಿವಾದಿಗೆ 2 ಎಕರೆ 2 ಗುಂಟೆ ಜಮೀನನ್ನು ಕೊಟ್ಟಿದ್ದು, ವಾದಿಯರಿಗೆ ದಾವಾ ಸ್ವತ್ತಿನಲ್ಲಿ ಸಮನಾದ ಹಿಸ್ಸೆ, ಹಕ್ಕು ಇದ್ದರೂ ಸಹ 4 ನೇ ಪ್ರತಿವಾದಿಯು ಅವರ ಹಿಸ್ಸೆಗೆ ಬಂದಂತಹ 2 ಎಕರೆ 2 ಗುಂಟೆ ಜಮೀನನ್ನು 5 ನೇ ಪ್ರತಿವಾದಿಗೆ ದಿನಾಂಕ 11.02.2011 ರಂದು ನೋಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತಾರೆಂದು ಹೇಳಿರುತ್ತಾರೆ. ಅವರು ಮುಂದುವರೆದು, ಪ್ರತಿವಾದಿಯರು ದಾವಾ ಸ್ವತ್ತಿನ ಖಾತೆ ಅವರ

ಹೆಸರಿನಲ್ಲಿರುವುದನ್ನು ದುರುಪಯೋಗಪಡಿಸಿಕೊಂಡು ಅದನ್ನು ಮೂರನೇ ವ್ಯಕ್ತಿ ಪರಭಾರೆ ಮಾಡುವ ಹುನ್ನಾರದಲ್ಲಿರುವ ಕಾರಣ ದಾವಾ ಸ್ವತ್ತನ್ನು ಯಾರಿಗೂ ಪರಭಾರೆ ಮಾಡದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ನೀಡಬೇಕೆಂದು ಪ್ರಾರ್ಥಿಸಿರುತ್ತಾರೆ.

5 ನೇ ಪ್ರತಿವಾದಿಯು ದಾವಾ ಸ್ವತ್ತನ್ನು ಖರೀದಿಸುವ ಸಮಯದಲ್ಲಿ 4 ನೇ ಪ್ರತಿವಾದಿ ಮತ್ತು ಅವರ ಕುಟುಂಬಕ್ಕೆ ದಾವಾ ಸ್ವತ್ತು ದಿನಾಂಕ 01.09.2010 ರ ವಿಭಾಗ ಪತ್ರದ ಮೇರೆಗೆ ಬಂದಿದ್ದು, ಸದರಿ ಸ್ವತ್ತನ್ನು ಖರೀದಿ ಮಾಡಿದ ದಿನಾಂಕದಿಂದ ಲಕ್ಷಾಂತರ ರೂಪಾಯಿ ಹಣವನ್ನು ಖರ್ಚು ಮಾಡಿ ಅಭಿವೃದ್ಧಿಪಡಿಸಿ ಅಡಿಕೆ ಮತ್ತು ತೆಂಗಿನ ತೋಟವನ್ನು ಮಾಡಿರುತ್ತೇನೆಂದು ಹೇಳಿರುತ್ತಾರೆ. ಅವರು ಮುಂದುವರೆದು, ದಾವಾ ಸ್ವತ್ತು ವಾದಿಯರ ಪಿತ್ರಾರ್ಜಿತ ಸ್ವತ್ತಾಗಿರುತ್ತದೆನ್ನುವ ಅಂಶವನ್ನು ಅಲ್ಲಗಳೆದಿರುತ್ತಾರೆ.

ವಾದಿಯರು ತಮ್ಮ ಪ್ರಕರಣವನ್ನು ಪುಷ್ಟೀಕರಿಸುವ ಸಲುವಾಗಿ ದಾವಾ ಸ್ವತ್ತಿಗೆ ಸಂಬಂಧಪಟ್ಟ ಪಹಣಿ ಪತ್ರಿಕೆಗಳು, ಮ್ಯುಟೇಷನ್ ಆದೇಶದ ಪ್ರತಿಗಳು, ದಿನಾಂಕ 24.07.1996 ರ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿರುತ್ತಾರೆ. ವಾದಿಯರು ಹಾಜರುಪಡಿಸಿರುವ ಪಹಣಿ ಪತ್ರಿಕೆಗಳು ಹಾಗೂ ಮ್ಯುಟೇಷನ್ ಆದೇಶದ ಪ್ರತಿಗಳ ಪ್ರಕಾರ ದಿನಾಂಕ 01.09.2010 ರ ವಿಭಾಗ ಪತ್ರದಂತೆ ದಾವಾ ಸರ್ವೆ ನಂಬರ್‌ನಲ್ಲಿರುವ ಒಟ್ಟು 4 ಎಕರೆ 2 ಗುಂಟೆ ಜಮೀನಿನಲ್ಲಿ 2 ಎಕರೆ ಕೆ.ಎನ್.ಚಂದ್ರಪ್ಪನವರ ಹೆಸರಿಗೂ, 2 ಎಕರೆ 2 ಗುಂಟೆ ಜಮೀನು 4 ನೇ ಪ್ರತಿವಾದಿಯ ಹೆಸರಿಗೂ ಖಾತೆ ಬದಲಾವಣೆಯಾಗಿರುತ್ತದೆ. 4 ನೇ ಪ್ರತಿವಾದಿಯ ಹಿಸ್ಸೆಗೆ ಬಂದಿದ್ದ 2 ಎಕರೆ 2 ಗುಂಟೆ ಜಮೀನನ್ನು 4 ನೇ ಪ್ರತಿವಾದಿಯು 5 ನೇ ಪ್ರತಿವಾದಿಗೆ ಶುದ್ಧ ಕ್ರಯಕ್ಕೆ ಮಾರಾಟ ಮಾಡಿದ್ದು, ಪ್ರಸ್ತುತ ಸದರಿ ಜಮೀನು 5 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆನ್ನುವುದರಲ್ಲಿ ಯಾವುದೇ ವಿವಾದವಿರುವುದಿಲ್ಲ. ವಾದಿಯರು ದಿನಾಂಕ 01.09.2010 ಹಾಗೂ 16.04.2013 ರ ವಿಭಾಗ ಪತ್ರಗಳ ದೃಢೀಕೃತ ನಕಲುಗಳನ್ನೂ ಸಹ ಹಾಜರುಪಡಿಸಿರುತ್ತಾರೆ. ದಿನಾಂಕ 01.09.2010 ರ ವಿಭಾಗದಲ್ಲಿ ದಾವಾ ಸರ್ವೆ ನಂಬರ್‌ನಲ್ಲಿರುವ 4 ಎಕರೆ 2 ಗುಂಟೆ ಜಮೀನಿನಲ್ಲಿ

ಪಶ್ಚಿಮ ಭಾಗದ 2 ಎಕರೆ ಜಮೀನು 1 ನೇ ಪ್ರತಿವಾದಿಯ ಗಂಡನಾದ ಕೆ.ಎನ್.ಚಂದ್ರಪ್ಪನವರ ಹಿಸ್ಸೆಗೂ ಇನ್ನುಳಿದ 2 ಎಕರೆ 2 ಗುಂಟೆ ಜಮೀನು 4 ನೇ ಪ್ರತಿವಾದಿಯ ಹಿಸ್ಸೆಗೂ ಬಂದಿರುತ್ತದೆ. ದಿನಾಂಕ 16.04.2013 ರ ವಿಭಾಗ ಪತ್ರದ ಪ್ರಕಾರ ದಿನಾಂಕ 01.09.2010 ರ ವಿಭಾಗದ ಪತ್ರದಡಿ ಕೆ.ಎನ್.ಚಂದ್ರಪ್ಪನವರ ಹಿಸ್ಸೆಗೆ ಬಂದಿದ್ದ 2 ಎಕರೆ ಜಮೀನನ್ನು 4 ನೇ ಪ್ರತಿವಾದಿಯ ಹಿಸ್ಸೆಗೆ ಕೊಟ್ಟಿರುತ್ತಾರೆ. ಅವರು ಮುಂದುವರೆದು, ದಿನಾಂಕ 11.02.2011 ರ ನೋಂದಾಯಿತ ಕ್ರಯ ಪತ್ರದ ದೃಢೀಕೃತ ನಕಲನ್ನೂ ಸಹ ಹಾಜರುಪಡಿಸಿದ್ದು, ಸದರಿ ಕ್ರಯಪತ್ರದ ಪ್ರಕಾರ 4 ನೇ ಪ್ರತಿವಾದಿಯು ದಿನಾಂಕ 01.09.2010 ರ ವಿಭಾಗ ಪತ್ರದಡಿ ಅವರ ಹಿಸ್ಸೆಗೆ ಬಂದಿದ್ದ 2 ಎಕರೆ 2 ಗುಂಟೆ ಜಮೀನನ್ನು 5 ನೇ ಪ್ರತಿವಾದಿಯ ಹೆಸರಿಗೆ ಮಾರಾಟ ಮಾಡಿರುತ್ತಾರೆ. ಪ್ರಸ್ತುತ ದಾವಾ ಸರ್ವೆ ನಂಬರ್‌ನಲ್ಲಿರುವ 2 ಎಕರೆ 2 ಗುಂಟೆ ಜಮೀನು 5 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆನ್ನುವುದರಲ್ಲಿ ಯಾವುದೇ ವಿವಾದವಿರುವುದಿಲ್ಲ,

ಪ್ರಸ್ತುತ ಪ್ರಕರಣದಲ್ಲಿ 1 ರಿಂದ 4 ನೇ ಪ್ರತಿವಾದಿಯರು ವಾದಿಯ ಪ್ರಕರಣವನ್ನು ಅಲ್ಲಗಳೆಯಲು ಯಾವುದೇ ಪ್ರತಿವಾದ ಪತ್ರವನ್ನು ಸಲ್ಲಿಸದೇ ಇದ್ದರೂ ಸಹ 4 ನೇ ಪ್ರತಿವಾದಿಯಿಂದ ಜಮೀನನ್ನು ಖರೀದಿಸಿದ 5 ನೇ ಪ್ರತಿವಾದಿಯು ದಾವಾ ಸ್ವತ್ತು ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಯರ ಪಿತ್ರಾರ್ಜಿತ ಸ್ವತ್ತಾಗಿರುತ್ತದೆನ್ನುವ ಅಂಶವನ್ನು ಅಲ್ಲಗಳೆದಿರುತ್ತಾರೆ. ದಾವಾ ಸ್ವತ್ತು ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಯರ ಪಿತ್ರಾರ್ಜಿತ ಸ್ವತ್ತಾಗಿದ್ದು, 1 ರಿಂದ 4 ನೇ ಪ್ರತಿವಾದಿಯರು 1 ನೇ ವಾದಿಯ ಗಂಡ ಹಾಗೂ 2 ನೇ ವಾದಿಯ ತಂದೆಯನ್ನು ಹೊರತುಪಡಿಸಿ ವಿಭಾಗ ಮಾಡಿಕೊಂಡಿದ್ದು, ಸದರಿ ವಿಭಾಗದಿಂದ ವಾದಿಯರಿಗೆ ದಾವಾ ಸ್ವತ್ತಿನ ಮೇಲಿರುವ ಹಕ್ಕಿಗೆ ಚ್ಯುತಿಯುಂಟಾಗುತ್ತದೆಯೇ ಎನ್ನುವುದನ್ನು ಪರಿಗಣಿಸಲು ಪ್ರಕರಣದ ಸಂಪೂರ್ಣ ವಿಚಾರಣೆಯ ಅಗತ್ಯವಿರುತ್ತದೆ. ವಾದಿಯರು ಪ್ರತಿವಾದಿಯರು ದಾವಾ ಸ್ವತ್ತನ್ನು ಮಾರಾಟ ಮಾಡುವ ಅಥವಾ ಬ್ಯಾಂಕಿಗೆ ಆಧಾರ ಮಾಡುವ ಹುನ್ನಾರದಲ್ಲಿದ್ದು, ಒಂದುವೇಳೆ ಅವರು ದಾವಾ ಸ್ವತ್ತನ್ನು ಮಾರಾಟ ಮಾಡಿದರೆ ಅಥವಾ ಬ್ಯಾಂಕಿನಲ್ಲಿ ಆಧಾರ ಮಾಡಿದರೆ ದಾವಾ ಸ್ವತ್ತಿನಲ್ಲಿರುವ ಅವರ ಹಕ್ಕು, ಹಿತಾಸಕ್ತಿಗೆ ಧಕ್ಕೆಯುಂಟಾಗುತ್ತದೆಂದು ಹೇಳಿರುತ್ತಾರೆ.

ವಾದಿಯು ಹಾಜರುಪಡಿಸಿರುವ ದಿನಾಂಕ 07.08.2020 ರ ಕ್ರಯ ಒಪ್ಪಂದದ ಕರಾರು ಪತ್ರದ ರದ್ದಿಯಾತಿ ಪತ್ರದ ಪ್ರಕಾರ 4 ನೇ ಪ್ರತಿವಾದಿಯು ದಿನಾಂಕ 16.04.2013 ರ ವಿಭಾಗ ಪತ್ರದಡಿ ಅವರ ಹಿಸ್ಸೆಗೆ ಬಂದಿದ್ದ ದಾವಾ ಸರ್ವೆ ನಂಬರ್ನಲ್ಲಿರುವ 2 ಎಕರೆ ಜಮೀನನ್ನು ಕೆ.ಸಿ.ಕಾಂತರಾಜು ರವರಿಗೆ ಮಾರಾಟ ಮಾಡಲು ಕ್ರಯ ಒಪ್ಪಂದದ ಕರಾರು ಪತ್ರ ಮಾಡಿಕೊಂಡಿದ್ದು, ಸದರಿ ಕರಾರು ಪತ್ರವನ್ನು ರದ್ದುಪಡಿಸಿಕೊಂಡಿರುತ್ತಾರೆ. ಸದರಿ ದಾಖಲೆಯ ಪ್ರಕಾರ 4 ನೇ ಪ್ರತಿವಾದಿಯು ಕ್ರಯದ ಕರಾರು ಪತ್ರವನ್ನು ರದ್ದು ಮಾಡಿಕೊಂಡಿದ್ದರೂ ಸಹ ಅವರು ದಾವಾ ಸರ್ವೆ ನಂಬರ್ನಲ್ಲಿರುವ 2 ಎಕರೆ ಜಮೀನನ್ನು ಮಾರಾಟ ಮಾಡುವ ಉದ್ದೇಶವನ್ನು ಹೊಂದಿರುತ್ತಾರೆನ್ನುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಒಂದುವೇಳೆ ವಾದಿಯರು ಪ್ರಸ್ತುತ ಪ್ರಕರಣದಲ್ಲಿ ಪ್ರಾರ್ಥಿಸಿರುವಂತೆ ಪರಿಹಾರವನ್ನು ಪಡೆಯಲು ಯಶಸ್ವಿಯಾದಲ್ಲಿ ದಾವಾ ಸ್ವತ್ತಿನ ಖರೀದಿದಾರರಿಂದ ವಾದಿಯರ ಹಿಸ್ಸೆ ಸ್ವತ್ತಿನ ಸ್ವಾಧೀನವನ್ನು ಪಡೆದುಕೊಳ್ಳಲು ಮತ್ತೊಮ್ಮೆ ಪ್ರಕರಣವನ್ನು ದಾಖಲು ಮಾಡಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಇದರಿಂದ ವಾದಿಯರಿಗೆ ತುಂಬಲಾರದ ನಷ್ಟ ಉಂಟಾಗುವ ಸಾಧ್ಯತೆ ಇದ್ದು, ವಾದಿಯ ಪರವಾಗಿ ಪ್ರತಿವಾದಿಯರು ದಾವಾ ಸ್ವತ್ತನ್ನು ಪ್ರಸ್ತುತ ಪ್ರಕರಣ ತೀರ್ಮಾನವಾಗುವವರೆಗು ಯಾರಿಗೂ ಪರಭಾರೆ ಮಾಡದಂತೆ ಆದೇಶ ಮಾಡಿದ್ದಲ್ಲಿ ಪ್ರತಿವಾದಿಯರಿಗೆ ಯಾವುದೇ ತೊಂದರೆಯುಂಟಾಗುವುದಿಲ್ಲವೆನ್ನುವ ಅಭಿಪ್ರಾಯಕ್ಕೆ ಬಂದಿರುತ್ತೇನೆ. ಈ ಕಾರಣಗಳಿಂದ ಅಂಶ 1 ರಿಂದ 3ನ್ನು ಸಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

**11. ಅಂಶ:-4:** ಈ ಮೇಲಿನ ಎಲ್ಲಾ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶ ಮಾಡಿರುತ್ತೇನೆ.

## ಆದೇಶ

ವಾದಿಯರು/ಅರ್ಜಿದಾರರು ಸಿ.ಪಿ.ಸಿ ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಸಲ್ಲಿಸಿದಂತಹ ಮಧ್ಯಂತರ ಅರ್ಜಿ ಸಂಖ್ಯೆ:1 ನ್ನು ಪುರಸ್ಕರಿಸಲಾಗಿದೆ.

ಪರಿಣಾಮವಾಗಿ ಪ್ರತಿವಾದಿಯರಾಗಲೀ ಅಥವಾ ಅವರ ಪ್ರತಿನಿಧಿಗಳಾಗಲೀ ದಾವಾ ಸ್ವತ್ತನ್ನು ಯಾರಿಗೂ ಪರಭಾರೆ ಮಾಡದಂತ ಅಥವಾ ಬ್ಯಾಂಕಿಗೆ ಆಧಾರ ಮಾಡದಂತೆ ಈ ದಾವಾ ತೀರ್ಮಾನವಾಗುವವರೆಗೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ನೀಡಲಾಗಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶವಿರುವುದಿಲ್ಲ.

*(ಈ ಮಧ್ಯಂತರ ಅರ್ಜಿಯನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ಕೊಟ್ಟು, ಬೆರಳಚ್ಚು ಮಾಡಿಸಿದ ನಂತರ, ಓದಿ ತಿದ್ದಿ, ಪ್ರತಿ ತೆಗೆದು ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕಃ 21ನೇ ಸೆಪ್ಟೆಂಬರ್ 2020 ರಂದು ನಾನು ಉದ್ಘೋಷಿಸಿದ್ದೇನೆ.)*

ಸಹಿ/-

**(ಪವಿತ್ರ.ಎಂ.ಡಿ)**
**ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾ.ದ.**
**ತರೀಕೆರೆ.**